**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**
**ಸಿ.ಸಿ.ನಂ 51/2015**

ದಿನಾಂಕ:20.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಿ.ಡಬ್ಲ್ಯೂ:2 ಸಿ.ಡಬ್ಲ್ಯೂ: **3**

ಸಾಕ್ಷಿಯ ಹೆಸರು : ಮಂಜಮ್ಮ
ತಂದೆಯ ಹೆಸರು : ರಾಮಯ್ಯ
ಗಂಡನ ಹೆಸರು : ಮೂಡ್ಲಪ್ಪ
ವಯಸ್ಸು : 58 ವರ್ಷ
ಉದ್ಯೋಗ : ವ್ಯವಸಾಯ
ವಾಸ : ಚಿಕ್ಕಬಾಸೂರು

**ಮುಖ್ಯ ವಿಚಾರಣೆ: ಮಾನ್ಯ ಸಸಅ ಅವರಿಂದ:-**

ಆರೋಪಿಗಳ ಪರಿಚಯ ಇರುತ್ತದೆ. ಚಾಸಾ-1 ರವರ ನಮ್ಮ ಮಾವ. ಚಾಸಾ-2 ನನ್ನ ಮೈದುನ, ಮೂಡ್ಲಪ್ಪ ನನ್ನ ಗಂಡ. ಕಡೂರಿನ ಲಕ್ಷ್ಮೀಶ ನಗರದಲ್ಲಿ ನನ್ನ ಮಾವನಿಗೆ ಮನೆಗಳು ಇವೆ. ನನ್ನ ಮಾವನ ಹೆಸರಿನಲ್ಲಿ 5 ಮನೆಗಳು ಇವೆ. ಅದರ ಅಸೆಸ್ಮೆಂಟ್ ನಂಬರ್ ನನಗೆ ತಿಳಿದಿರುವುದಿಲ್ಲ. 1 ನೇ ಆರೋಪಿಯು ನನ್ನ ಮಾವನ ಹೆಸರಿನಲ್ಲಿ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ರೂ.1,41,000/- ಸಾಲ ಪಡೆದಿರುತ್ತಾರೆ. ಸದರಿ ಸಾಲವನ್ನು ಮಾವ ಮಾಡಿರುವುದಿಲ್ಲ. ಆರೋಪಿತರು ನಕಲಿ ಸಹಿ ಮಾಡಿ ಸಾಲ ಪಡೆದಿರುತ್ತಾರೆ. 2 ನೇ ಆರೋಪಿಯು ಸಹ ನನ್ನ ಮಾವನ ಹೆಸರಿನಲ್ಲಿದ್ದ ವಿದ್ಯುತ್ ಸಂಪರ್ಕವನ್ನು ನಕಲಿ ಸಹಿಗಳನ್ನು ಮಾಡಿ ತನ್ನ ಹೆಸರಿಗೆ ಮಾಡಿಕೊಂಡಿರುತ್ತಾರೆ. ಸದರಿ ವಿದ್ಯುತ್ ಸಂಪರ್ಕ ಪಡೆದಿರುವ ಸಂಖ್ಯೆ ನೆನಪಿರುವುದಿಲ್ಲ.

ನಾನು ಸಹಕಾರ ಸಂಘದಿಂದ ಸಾಲ ಮಾಡಿಲ್ಲ ಮತ್ತು ವಿದ್ಯುತ್ ಸಂಪರ್ಕದ ಬದಲಾವಣೆಗೆ ಸಮ್ಮತಿ ಸೂಚಿಸಿರುವುದಿಲ್ಲ, ಆದರೂ ಮೋಸದಿಂದ ಸಹಿಗಳನ್ನು ಮಾಡಿ ಸಂಪರ್ಕ ಪಡೆದಿದ್ದೀರ ಹಾಗೂ ಸಾಲ ಪಡೆದ್ದೀರಾ ಎಂದು ನನ್ನ ಮಾವ ಆರೋಪಿಗಳನ್ನು ಕೇಳಿದ್ದಕ್ಕೆ 1 ನೇ ಆರೋಪಿಯು ನನ್ನ ಮಾವನಿಗೆ ಕೈಯಿಂದ ಹೊಡೆದು, ಕೊಲೆ ಮಾಡುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿದರು. 2 ನೇ ಆರೋಪಿಯು ಅವಾಚ್ಯ ಶಬ್ದಗಳಿಂದ ನಿಂದಿಸಿದರು. ನಂತರ ನನ್ನ ಮಾವ ಕಾನೂನು ಕ್ರಮ ಕೈಗೊಂಡಿರುತ್ತಾರೆ. ಸಾಕ್ಷಿಯು ವಿದ್ಯುತ್ ಸಂಪರ್ಕದ ಮೀಟರ್ ಖಾತೆ ಬದಲಾವಣೆಯ ಅರ್ಜಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಮತ್ತು 3 ಎಂದು, ಸಾಕ್ಷಿಯು ಎರಡು ಅಸೆಸ್ಮೆಂಟ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀಸವಾಲು: ಮಾನ್ಯ ಸಸಅ. ರವರಿಂದ :**

ವಿದ್ಯುತ್ ಮೀಟರ್ ಸಂಪರ್ಕದ ಸಂಖ್ಯೆ ಕೆ.ಎಲ್.3488, 3489,3490 ಮತ್ತು ಎ.ಹೆಚ್.792,793,794 ಮತ್ತು 795 ಆಗಿರುತ್ತದೆ ಎಂದರೆ ಸರಿ. ಚಾಸಾ-1 ರವರ ಮನೆಯ

ಅಸೆಸ್ಮೆಂಟ್ ಸಂಖ್ಯೆ:3862/2 ಹಾಲಿ ಸಂಖ್ಯೆ: 2615/2468 ಎಂದರೆ ಸರಿ.

<u>ಪಾಟೀಸವಾಲು:</u> **<u>ಆರೋಪಿತರ ಪರ ಶ್ರೀ ಬಿ.ಆರ್. ವಕೀಲರು ಕಾಲವಕಾಶವನ್ನು ಕೋರಿದ್ದು, ಮುಂದೂಡಲಾಯಿತು.</u>**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,
ಕಡೂರು.